# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.992-2020                    ಡಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಧರ್ಮೇಶ್<br>ನಾಗಪ್ಪ<br>32 ವರ್ಷ<br>ಖಾಸಗಿ ಕಾರ್ಖಾನೆ ನೌಕರ<br>ಬದನವಾಳು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 07-04-2025. |

**<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎನ್.ಎಸ್ ವಕೀಲರಿಂದಃ</u>**

ಪಿರ್ಯಾದಿ ನನ್ನ ಸೋದರ ಮಾವನಾಗಬೇಕು. ಪಿರ್ಯಾದಿದಾರರು ಹೇಳುವಂತೆ ದಿ.31-05-2020 ರಂದು ನನಗೆ ಸಾಲವಾಗಿ ಹಣ ನೀಡಿರುವುದಿಲ್ಲ ಮತ್ತು ನಾನು ದಿ.04-11-2020 ರಂದು ಸದರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಂಬಂಧ ಪಿರ್ಯಾದಿದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ಪಿರ್ಯಾದಿದಾರರು ನನಗೆ ಮನೆ ಕಟ್ಟುವ ಸಲುವಾಗಿ ಸಾಲವಾಗಿ ಹಣ ನೀಡಿರುವುದಾಗಿ ತಿಳಿಸಿದ್ದು, ಆದರೆ ನಾವು 2014-15 ರಲ್ಲಿಯೇ ಸರ್ಕಾರದ ಆಶ್ರಯ ಯೋಜನೆ ಅಡಿಯಲ್ಲಿ ಮನೆಯನ್ನು ಕಟ್ಟಿರುತ್ತೇವೆ. ನಾವು 2017 ರಲ್ಲಿಯೇ ಸದರಿ ಮನೆಗೆ ವಿದ್ಯುತ್ ಸಂಪರ್ಕವನ್ನು

ಪಡೆದುಕೊಂಡಿರುತ್ತೇವೆ. ಈಗಲೂ ಸಹ ನಮ್ಮ ಮನೆಗೆ ಗಾರೆ ಮಾಡಿಸಿರುವುದಿಲ್ಲ, ನೆಲವನ್ನು ಸಗಣಿಯಿಂದ ತಾರಿಸಿರುತ್ತೇವೆ.

2. ದಿ.05-10-2016 ರಂದು ಪಿರ್ಯಾದಿದಾರರಾದ ನನ್ನ ಮಾವನವರು ಮೈಸೂರಿ ಎನ್.ಆರ್.ಮೊಹಲ್ಲಾದಲ್ಲಿ ಇರುವ ಐ.ಸಿ.ಐ.ಸಿ.ಐ ಬ್ಯಾಂಕಿನಿಂದ ಸಾಲವನ್ನು ಪಡೆಯುತ್ತಿದ್ದು, ಸದರಿ ಸಾಲದ ಭದ್ರತೆಗಾಗಿ ನನ್ನಿಂದ 3 ಚೆಕ್ಕುಗಳನ್ನು ಬ್ಯಾಂಕಿಗೆ ನೀಡುವ ಸಲುವಾಗಿ ನನ್ನಿಂದ ಪಡೆದಿರುತ್ತಾರೆ. ಸದರಿ ಚೆಕ್ಕುಗಳ ನಂ.323777, 323776 ಮತ್ತು 323778 ಆಗಿರುತ್ತದೆ. ಪಿರ್ಯಾದಿದಾರರು ಬ್ಯಾಂಕಿನಿಂದ ಸಾಲ ಪಡೆಯುವ ಸಮಯ ತಮ್ಮ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದು, ಆ ಸಮಯ ನಾನು ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಲೋಕೇಶ್ ಮತ್ತು ಉಮೇಶ್ ಎಂಬುವವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಪಿರ್ಯಾದಿದಾರರಿಗೆ ಮೈಸೂರಿನ ಇಲವಾದಲ್ಲಿ ಸ್ವಂತ ಮನೆ ಇದ್ದು, ಪಿರ್ಯಾದಿದಾರರು ನನಗೆ ಸಾಲ ನೀಡಿದರು ಎಂದು ಹೇಳುವ ಸಮಯ ಹೊಳೆನರಸೀಪುರದಲ್ಲಿ ಖಾದಿ ಗ್ರಾಮೋದ್ಯೋಗ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

3. ನಾನು ಮತ್ತು ನನ್ನ ತಂದೆ–ತಾಯಿಗಳು ಬದನವಾಳು ಗ್ರಾಮದಲ್ಲಿ ವಾಸವಾಗಿದ್ದು, ನನ್ನ ತಾಯಿಯವರು ವಿಭಾಗಕ್ಕಾಗಿ ದಾವೆ ಸಲ್ಲಿಸಿರುವುದರಿಂದ ಪಿರ್ಯಾದಿದಾರರು ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ನಾನು ಮತ್ತು ನನ್ನ ತಾಯಿಯವರು ಬದನವಾಳು ಗ್ರಾಮದಲ್ಲಿ ಇರುವ ನನ್ನ ಅಜ್ಜಿ ಮತ್ತು ತಾತನವರ ತೋಟದ ಮನೆ ಮತ್ತು ಜಮೀನಿನಲ್ಲಿ ವಾಸವಾಗಿದ್ದು, ಪಿರ್ಯಾದಿದಾರರು ನಮ್ಮೊಂದಿಗೆ ಜಗಳ ಮಾಡಿ ಮನೆಯಿಂದ ಹೊರಗೆ ಕಳುಹಿಸಿರುತ್ತಾರೆ. ಪಿರ್ಯಾದಿದಾರರು ಈ ಪಿರ್ಯಾದನ್ನು ದಾಖಲಿಸುವ ಪೂರ್ವದಲ್ಲಿಯೇ ನನ್ನ ತಾಯಿಯವರ ವಿಭಾಗಕ್ಕಾಗಿ ಪಿರ್ಯಾದಿದಾರರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ಪಿರ್ಯಾದಿದಾರರು ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ ನಂತರ ನಾನು ಪಿರ್ಯಾದಿದಾರರ ಬಳಿ ಹೋಗಿ ಏಕೆ ಈ ಕೇಸನ್ನು ದಾಖಲು ಮಾಡಿದ್ದೀರಿ ಎಂದು ಪ್ರಶ್ನಿಸಿದ್ದಕ್ಕೆ, ನನ್ನ ತಾಯಿ ಅವರ ವಿರುದ್ಧ ವಿಭಾಗಕ್ಕಾಗಿ ಸಲ್ಲಿಸಿದ ದಾವೆಯನ್ನು ವಾಪಸ್ಸು ಪಡೆದ ಪಕ್ಷದಲ್ಲಿ ಈ ಕೇಸನ್ನು ವಾಪಸ್ಸು ಪಡೆಯುವುದಾಗಿ ತಿಳಿಸಿರುತ್ತಾರೆ.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**